ಇವಕ್ಕೆಲ್ಲಿ? ನನ್ನ ವರ್ಚಸ್ಸಿನ ಬಗ್ಗೆ ಅವನಿಗೆ ಭಯವೂ ಇದ್ದಿರಬಹುದು ಅಂದುಕೊಳ್ಳುವಾಗ ಮದುವೆಗೆಂದು ಹಳ್ಳಿಗೆ ಬರುವ ಹಿಂದಿನ ದಿನ ನಡೆದದ್ದು ನೆನಪಿಗೆ ಬರುತ್ತದೆ.

ಅವನ ಮನೆಯಲ್ಲಿ ಹೋಗಿ ಕೂತ ಇವಳನ್ನು ಉಗಿದು ಎಳೆತಂದಾಗ ಅವನೇನಂತಹ ಪ್ರತಿಭಟನೆ ತೋರಿಸಿರಲಿಲ್ಲ, ಮಂಕಾಗಿದ್ದ. ಕೈಗೆ ಕೈ ಹತ್ತಬಹುದೆಂದು ಮೊದಲೆ ಪೊಲೀಸ್ ಮಿತ್ರರಿಗೆ ಹೇಳಿ ಜೊತೆಗೆ ಒಂದಿಬ್ಬರು ಹಳೆ ಸ್ನೇಹಿತರನ್ನೂ ಕರೆದುಕೊಂಡೇ ಹೋಗಿದ್ದೆ. ಅವನು ಗೌರವದಿಂದ ಮಾತನಾಡಿದ್ದ. 'ಬನ್ನಿ ಸಾರ್. ಕೂತ್ಕೊಂಡು ಮಾತನಾಡೋಣ. ನಾವೇನು ಹೊಸದಾಗಿ ಪ್ರೇಮಿಸುತ್ತಿರುವವರಲ್ಲ ಸಾರ್. ನಾವು ಗಂಡ ಹೆಂಡಿರೆಂದು ತೀರ್ಮಾನಿಸಿ, ತೀರ್ಮಾನಿಸಿದ ಬದುಕೂ ಹಳೆಯದಾಗುತ್ತಿದೆ. ನೀವು ವಿಶಾಲ ಮನೋಭಾವದಿಂದ ನೋಡ್ಬೇಕು ಸಾರ್' ಅಂದಿದ್ದ. ಕಳ್ಳನಂತೆ ಅವನ ಮನೆಗೆ ನುಗ್ಗಿದ್ದ ನಾನು ಅವನಿಗೆ ಮುಖಕ್ಕೆ ಮುಖಕೊಡದೆ ಅಸಭ್ಯ ರೀತಿಯಲ್ಲಿ ಕೂಗಾಡಿ ಇವಳನ್ನು ಕರೆದುಕೊಂಡು ಬಂದಿದ್ದೆ. ಆಗಲೂ ಅವನು ತಣ್ಣಗಿದ್ದ. ಇವಳು ಅಳುತ್ತ ನನ್ನ ಹಿಂದೆ ಹೊರಟಾಗ, 'ಇಂಥ ಮರ್ಯಾದಸ್ಥನ್ನ ಹೆಂಗೆ ವಿಚಾರಿಸಿಕೊಳ್ಳಬೇಕಂತ ನನ್ಗೆ ಗೊತ್ತೈತೆ...' ಅಂದಿದ್ದ. ಆ ಒಂದು ಮಾತು ನನ್ನ ಕೈಕಾಲುಗಳಲ್ಲಿನ ಬಲವನ್ನೇ ಕಸಿದಿತ್ತು. ಆ ದಿನ ಮಾತನಾಡುವಾಗಿನ ಅವನ ಮುಖದಲ್ಲಿನ ವ್ಯಗ್ರತೆ ಕಣ್ಣಿಗೆ ಕಟ್ಟಿದೆ. ಯಾವ ತಗಾದೆಯೂ ಇಲ್ಲದೆ ಇವಳು ಬಂದದ್ದು, ಮದುವೆಗೆ ಒಪ್ಪಿದ್ದು ಸಂತೋಷವೆನಿಸಿರಲಿಲ್ಲ. ಅಪಾಯದ ಅಂಚಿನಲ್ಲಿದ್ದೇವೆಂತಲೂ ಅನಿಸುತ್ತಿದೆ. ಅಂದಿನಿಂದ ಇಂದಿನವರೆಗೂ ಈಕೆಗೂ, ನನಗೂ, ಇವಳಿಗೂ ಸರಿಯಾಗಿ ಊಟವಿಲ್ಲ, ನಿದ್ರೆಯಿಲ್ಲ.

ಇಷ್ಟೆಲ್ಲ ಆಟ ಆಡಿ, ಹೆಸರು ಮಾಡಿ, ಊರ ಮಾತಾಗಿದ್ದರೂ ಶೀಲ ಅದೃಷ್ಟವಂತೆಯೆ. ಎಂತಹವನನ್ನೋ ನೋಡಿ ಗಂಟು ಹಾಕಿ ಇವಳ ಮದುವೆ ಮುಗಿಸಿ ಮಾನ ಉಳಿಸಿಕೊಳ್ಳುವ ಆತುರದಲ್ಲಿ ನಾನಿದ್ದರೂ ಇಂಥವಳಿಗೆ ದೊರೆತವನೊಬ್ಬ, ಅಸಿಸ್ಟೆಂಟ್ ಕಮೀಷನರ್–ಅಂದಾಗ ರಾಯರು ದಯಾಮಯ, ಕಾಮಧೇನು, ಕಲ್ಪವೃಕ್ಷ ಅಂತೆಲ್ಲ ಭಾಗ್ಯ ಅಂದರೆ ನನಗೆ ವಿರೋಧಿಸುವ ಧೈರ್ಯ ಎಲ್ಲಿ? ನಮ್ಮ ಡಿ.ಸಿ. ಸಾಹೇಬರು ಹುಡುಗನನ್ನು ತೋರಿಸಿದವರು. ಮುಂದೆ ನಿಂತು ಮಾತುಕತೆ ನಡೆಸಿದವರು. ಕತೆ ಬರೆಯುವ ಶೀಲ– ಇವಳೇ ಅಂತ ತಿಳಿದ ಮೇಲೆ ಹುಡುಗ ಸಹ ಹೆಚ್ಚು ತಕರಾರು ಮಾಡದೆ ಒಪ್ಪಿಕೊಂಡುಬಿಟ್ಟಿದ್ದ. ಎಂತವನೋ ಒಬ್ಬ ಗುಮಾಸ್ತ, ಇಲ್ಲವೆ ಮೇಷ್ಟ್ರನ್ನ ನೋಡಿ ಗಂಟುಹಾಕಿ ಹಟ ತೀರಿಸಿಕೊಳ್ಳಬೇಕೆಂಬುದೇ ನನ್ನ ಇಚ್ಛೆಯಾಗಿತ್ತು. ಇಲ್ಲವೆ ಪ್ರಯತ್ನವೂ ಅದೇ ಸ್ತರದಲ್ಲಿತ್ತು. 'ನಿನ್ನ ಗರ್ವಕ್ಕೆ ಸರಿಯಾಗಿ ಗುಮಾಸ್ತನೋ, ಮಾಸ್ತರನ್ನೋ ಗಂಟು ಹಾಕ್ತೇನೆ ಮುಂದೆ ನಿನ್ಗೆ. ಬರೀ ಬಡತನದ ಬಗ್ಗೆ ಬರಿತೀಯಲ್ಲ ಅನುಭವಿಸು. ಆಗ ಇನ್ನೂ ಚೆನ್ನಾಗಿ ಬರಿತೀಯೆ' ಅಂತ ವ್ಯಂಗ್ಯವಾಡಿದ್ದೆ. ಇವಳು ಸಾಯುತ್ತೇನಂತ ಹಟ ಹಿಡಿದಿದ್ದಳು.

ಮೊದಲನೆಯವಳಿಗೆ ಗಂಡು ಹುಡುಕವುದೇನು ತಾಪತ್ರಯವಾಗಲಿಲ್ಲ. ತಂಗಿಯ ಮಗ ಡಿಪ್ಲೊಮೋ ಇಂಜಿನಿಯರ್. ಅವನಿಗೆ ಕೊಡಬಾರದಂತ ಭಾಗ್ಯಳ ಹಟ. ಮೊದಲನೆಯವಳ ಬಗ್ಗೆಯೂ ಊರಿನಲ್ಲಿ ಪುಕಾರಾಗಿದ್ದು ಗೊತ್ತಿದ್ದೂ, ಹಣದ ಆಸೆಗೋ ರಕ್ತಸಂಬಂಧದ ವ್ಯಾಮೋಹಕ್ಕೋ ಕಟ್ಟುಬಿದ್ದು ತಾನಾಗಿಯೇ ಅಪೇಕ್ಷಿಸಿ ಬಂದ ಬಡತಂಗಿಯನ್ನು ಒದ್ದುಕೊಳ್ಳುವ ಮನಸ್ಸಾಗಿರಲಿಲ್ಲ. ಮೊದಲನೆಯವಳದ್ದು ನಿಶ್ಚಯವಾಗಿ ಮದುವೆಯ ದಿನಾಂಕ ನಿಗದಿಯಾದರೂ ಎರಡನೆಯವಳಿಗೆ ಗಂಡುಗಳಿಗಾಗಿ ಪರದಾಡುವಂತಾಗಿತ್ತು. ಹೆಸರಿನ ಜೊತೆಗೆ ಕೆಟ್ಟ ಹೆಸರನ್ನು ಸಂಪಾದಿಸಿದ್ದ ಇವಳನ್ನು ಯಾವನಿಗಾದರೂ ಕೊಟ್ಟು ಕೈ ತೊಳೆದುಕೊಳ್ಳುವುದೆಂದೇ ನಿರ್ಧರಿಸಿದ್ದ ನಾನು, ನಾನೇ ಕೆಲಸ ಕೊಡಿಸಿದ್ದ ನಮ್ಮವನೇ ಆದ